ಬೆಂಗಳೂರು ಡಿಸ್ಟ್ರಿಕ್ಟ್.

1907ನೆ ಇಸವಿ ಫೆಬ್ರವರಿ 15ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟ್ ಫಂಡು ಬೋರ್ಡ್ ವಿಾಟಿಂಗು ಪ್ರೊಸೀಡಿಂಗ್ಸ್.

ಅಫಿಷಿಯಲ್ ಮೆಂಬರುಗಳು.

ಹಾಜರು.

ಡಿಪ್ಯೂಟಿ ಕಮ್ಮಿಷನರವರು ಮತ್ತು ಪ್ರಸಿಡೆಂಟರು, ಮೆ॥ ಎಚ್. ಎಚ್. ಸ್ಪಿರ್ಕ್ಸ್ ಸಾಹೇಬರವರು.
ಬೆಂಗಳೂರು ಡಿಸ್ಟ್ರಿಕ್ಟ ಟ್ರೆಜರಿ ಆಫಿಸರವರು, ಮೆ॥ ಟಿ. ರಾಯಲ್ ಜೆಟ್ಟ್‌ವರು.
ಬೆಂಗಳೂರು ಡಿವೀರ್ಜ ಅಸಿಸ್ಟೆಂಟ್ ಕಮಿಷರ್ಸರು, ಮೆ॥ ಸಿ. ರಾಮರಾಯರವರು.
ಹೊಡ್ಡಬಳ್ಳಾಪುರ ಡಿವೀರ್ಜ ಅಸಿಸ್ಟೆಂಟ್ ಕಮಿಷರ್ಸರು, ಮೆ॥ ಕೆ. ಆರ್. ಶ್ರೀನಿವಾಸ ಐಯ್ಯಂಗಾರ್ರು.
ಎಗ್ಸಿಕ್ಯೂಟಿವ್ ಇಂಜನೀಯರು, ಮೆ॥ ಬಿ. ಎಸ್. ವೆಂಕಟಾಚಾರ್ಯರವರು.

ಗೈರ್ ಹಾಜರು.

ಕ್ಲೋಸ್‌ಪೇಟೆ ಸಬ್ ಡಿವೀರ್ಜ ಅಸಿಸ್ಟೆಂಟ್ ಕಮಿಷರ್ಸರವರು, ಮೆ॥ ಸಿ. ದೇವರಾಜ ಅರಸಿನವರು.
ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು, ಮೆ॥ ಇ. ಎಸ್. ಕೃಷ್ಣ ಸ್ವಾಮಿ ಐಯ್ಯರವರು.
ಸ್ಕೂಲ್‌ಗಳ ಡಿಪ್ಯೂಟಿ ಇನ್ಸ್‌ಪೆಕ್ಟರು, ಮೆ॥ ಎ. ವೀರಭದ್ರಪ್ಪನವರು.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ಮೆ॥ ವೇಲುಮೊದಲಿಯಾರು.
,, ಶ್ಯಾನುಭೋಗ ಕೀಗಿರಿಯಪ್ಪನವರು.
,, ದಾಸಪ್ಪನವರು.
,, ಯಾಲಕ್ಕಿ ಗೌಡರು.
,, ಕರೇಭೂಮಾ ನರಸಿಹ್ಮಕೆಟ್ಟರು.
,, ಕೆ. ಪುಟ್ಟಪ್ಪನವರು.
,, ಡಿ. ಶ್ರೀಕಂಠರಾಯರು.
,, ಕೆ. ಸುಬ್ಬಣ್ಣನವರು.
,, ಶೀನಪ್ಪನವರು.
,, ಬಾಳಾಜೀರಾಯರು.
,, ಜೋಡಿದಾರ್ ರಾಮಚಂದ್ರಪ್ಪನವರು.

ಗೈರ್ ಹಾಜರು.

ಮೆ॥ ನಂದಗುಡಿ ರಾಮಣ್ಣನವರು, (ಫವತಿ).
,, ಕರ್ನಿಕ ಕೃಷ್ಣಮೂರ್ತಿರಾಯರು, (ಸಂಜಾಯಿಷಿ ಕೇಳಿದೆ).
,, ಸಾಹುಕಾರ್ ಮುಸ್ತ್ಯಾ ಸಾಹೇಬರವರು, (ಅವರ ಅಳಿಯಂದರ ಖಾಯಿಲೆ ಸಬಬು).
,, ಪಿ. ಥಾಪ್ಪರ್ ಸಾಹೇಬರು.
,, ಪುಟ್ಟಮಾಸ್ತಿಗೌಡರು, (ಸಂಜಾಯಿಷಿ ಕೇಳಿದೆ).
,, ಗಾಸುಖರ್ ಸಾಹೇಬರು, (ಫವತಿ).

1. 1907—08ನೆ ಸಾಲಿನ ಬಜ್ಜೆಟ್ ಓದಲಾಯಿತು.

ಆ ಸಾಲಿನ ಒಟ್ಟು ಹುಬ್ಬುವಳಿ ಮೊಲಗಿನಲ್ಲಿ ಗಾರ್ನಮೆಂಟಿನವರು $\frac{1}{8}$ ಭಾಗ ಶಿಲ್ಕು ಉಳಿಸಿಕೊಳ್ಳಬೇಕೆಂದು ವಿಧಾಯಿಸಿ ಇರುವುದು ವಜಾ ಹೋಗುತ ಬಾಕಿ 5,210 ರೂಪಾಯಿ ಮಾತ್ರ ಉಳಿಯುತ್ತೆ. ಈ ಮೊಬಲಗು ವೈಕಿ ಮರಾಮತ್ತು ಡಿಪಾರ್ಟ್‌ಮೆಂಟಿಗೆ ಒರಿಜನಲ್ ಕಾಂಗಾರಿಗಳಿಗೆ ಅವರು ಕೇಳಿದ 20,000 ರೂಪಾಯಿಗೆ 1,018 ರೂಪಾಯಿ ಮಾತ್ರ ಕೊಡಬೇಕೆಂತಲೂ, ಈ ಸಾವಿರ ರೂಪಾಯಿ ನೆಲವಂಗಲದಿಂದ ಸೊಂಡೇಕೊಪ್ಪಕ್ಕೆ ಹೋಗತಕ್ಕ ರೋಡ್ ಪಾಡುವುದಕ್ಕೆ ಆ ಡಿಪಾರ್ಟ್‌ಮೆಂಟಿನವರು ಉಪಯೋಗಿಸಬೇಕೆಂತಲೂ ಬಾಕಿ ಉಳಿಯುವ 4,192 ರೂ. ಮುಂದೆ ಜರೂರಾತಿ ಖರ್ಚಿಗೋಸ್ಕರ ಉಳಿಸಿಕೊಳ್ಳಬೇಕೆಂತಲೂ, ಬೆಂಗಳೂರು ಮಾಗಡಿ ರಸ್ತೇಲಿರುವ ಮುರಿದುಹೋದ ಸೇತುವೆಯನ್ನು ಪುನಃ ಕಟ್ಟುವುದಕ್ಕೆ 3,000 ರೂಪಾಯಿಗಳನ್ನು ಲೋಕಲ್ ಫಂಡ್ ಜನರಲ್‌ನಿಂದ ಸ್ಯಾಂಕ್ಷನ್ ಕೊಡಿಸಲು ಗಾರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂತಲೂ, ಮತ್ತು ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆ ಒಳ್ಳೇ ಸ್ಥಿತಿಗೆ ತರತಕ್ಕ ವಿಚಾರದಲ್ಲಿ ಈ ರಸ್ತೆ ದೇವಸ್ಥಾನಕ್ಕೆ ಮಾತ್ರ ಹೋಗಲು ಅನುಕೂಲವಾಗಿರುತ್ತೆಯಾಗಿ ತಗಲುವ 1,000 ರೂಪಾಯಿ ಮುಜರಾಯಿ ಫಂಡಿನಿಂದ ಕೊಡಿಸಲು ಗಾರ್ನಮೆಂಟಿಗೆ ಬರಸಬೇಕೆಂತಲೂ ತೀರ್ಮಾನವಾಯಿತು.

2. ಬೆಂಗಳೂರು-ಮಂಗಳೂರು ರಸ್ತೆಯಲ್ಲಿ 21ನೆ ಮೈಲಿಯಿಂದ ನೆಲವಂಗಲ ತಾಲ್ಲೂಕು ಸೊಂಡೆಕೊಪ್ಪಕ್ಕೆ ಹೋಗಲು ಸದಾಗಿ ರಸ್ತೆ ಮಾಡಲು ತಗಲುವ 2,460 ರೂಪಾಯಿಗಳಿಗೆ ಅಂದಾಜಾವನ್ನು ಕಾಂಟರು ಸಿಗ್ನೇಚರು ಬಗ್ಯ 27-29—11-3ನೆ ಮತ್ತು ಶ್ರೀ253ನೆ ನಂಬರು ಡಾಕೆಟ್ ನೋಡನೆ ಕಳುಹಿಸಿದ್ದು ಓದಲಾಯಿತು.

ಮೇಲೆ ತೀರ್ಮಾನದಲ್ಲಿ ಈ ಕಾಂಗಾರಿಗೆ ಮಂಜೂರಾತಿ ಕೊಟ್ಟರುತ್ತೆ.

3. ದೊಡ್ಡಬಳ್ಳಾಪುರದ ತಾಲ್ಲೂಕು ಕಾವಲ್ಲಹಳ್ಳಿ ಗ್ರಾಮದಲ್ಲಿ ಹೊಸದಾಗಿ ಮನೆಗಳು ಕಟ್ಟುತಕ್ಕ ಜಾಗಕ್ಕೆ ಸರ್ವೆ ನಂಬರ್ 41ನೆ ಹಿಡುವಳಿದಾರನಿಂದ ತೆಗೆದುಕೊಳ್ಳತಕ್ಕ ವಿಚಾರವನ್ನು ಬೋರ್ಡಿನಲ್ಲಿಟ್ಟು ಬೋರ್ಡಿನ ತೀರ್ಮಾನವನ್ನು ಮತ್ತು ಡಿಟೋ ಜಾಗದಲ್ಲಿ ಮನೆಗಳನ್ನು ಕಟ್ಟುವುದು ಕ್ಷೇಮಕರ ಅಥವಾ ಇಲ್ಲವೆಂಬುದಕ್ಕೆ ಸ್ಯಾನಿಟೆರಿ ಅಧಿಕಾರಿಗಳ ಅಭಿಪ್ರಾಯವನ್ನು ಕಳುಹಿಸಿಕೊಡಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟಿಗಳ ಸೆಕ್ರಿಟೆರಿ ಸಾಹೇಬರವರಿಂದ ತಲ್ಪಿದ 14—12—06ನೆ ಮತ್ತು ಂ 5080—L. F. 235-06—2ನೆ ನಂಬರು ಡಾಕೆಟು ಓದಲಾಯಿತು.

ಇಂಥಾ ಸಂದರ್ಭಗಳಲ್ಲಿ ಸ್ಥಳಾಧಿಕಾರಿಗಳಿಗೆ ಜಾಗ ಅಜಮಾಯಿಷಿಯಿಂದ ಸರಿಯಾದ ಜಾಗ ಚುನ್ನಾಯಿಸತಕ್ಕವರೆಂದು ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

(3) A. ಐವರ್ಕಖಂಡಪುರಕ್ಕೂ ಬ್ಯಾಣಾವಾರಕ್ಕೆಲ್ಲೇ ಸ್ಟೇಷನ್‌ಗೂ ಮಧ್ಯೆ ಇರತಕ್ಕ ರಸ್ತೆಯನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಹೆಚ್ಚಾಗಿ ರೂ. 220—9—8-ಕೊಡಲು ಬೋರ್ಡು ಮಂಜೂರಾತಿ ಪಡೆಯಬೇಕೆಂತ ಬರಿಸಿದ ಮಿಲಿಟೆರಿ ಅಸಿಸ್ಟೆಂಟರವರ 2—1—07ನೆ ಮತ್ತು ಂ 2575ನೆ ನ್ಯಾಬ್ರುರು ಟ್ರೆಜರರು ಓದಲಾಯಿತು.

ಪೊಬಲಗು ಇಲ್ಲವೆಂದು ಇದನ್ನು ಸಮ್ಮತಿಸಲು ಯತ್ನವಿಲ್ಲವಾದ್ದಕ್ಕೆ ಬೋರ್ಡಿನವರು ಪಶ್ಚಾತ್ತಾಪಪಡುತ್ತಾರೆ.

4. ಗ್ರಾಮಗಳ ಪಾಕೀಜಾ ವಿಚಾರದಲ್ಲಿ ಅಭಿವೃದ್ಧಿಪಡಿಸಲು ಡಿಸ್ಟ್ರಿಕ್ಟ್ ಫಂಡು ಬಾಬತು ಕೊಂಚ ಪೊಬಲಗನ್ನು ಉಳಿಸಬೇಕೆಂಬುದನ್ನು ಆ ಪೊಬಲಗನ್ನು 50 ಮನೆಗಳಿಗೆ ಮೇಲ್ಪಟ್ಟಿರುವ ಹಳ್ಳಿಗಳಿಗೂ ಸರ್ಕಾರ ಪ್ರತಿ ವರ್ಷವೂ ಖರ್ಚು ಮಾಡಬೇಕೆಂತಲೂ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 218ನೆ ನಂಬರು ವಿಷಯವನ್ನು ಬೋರ್ಡಿನವರ ಆಲೋಚನೆಗೆ ಬ್ಯೆ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರಿಂದ 4—1—07ನೆ ಮತ್ತು ಂ 6041-8—L. F. 185-06—1ನೆ ನಂಬರು ಲೆಟರು ನೊಡನೆ ರವಾನಿಸಿದ್ದು ಓದಲಾಯಿತು.

ಈ ವಿಚಾರದಲ್ಲಿ ಖಂಡಿತವಾದ ನಿಬಂಧನೆ (Rules) ಮಾಡಲು ಸಾಧ್ಯವಿಲ್ಲವೆಂದೂ ಮತ್ತು ಅವಕಾಶವಾದಾಗೆಲ್ಲಾ ಇದಕ್ಕಾಗಿ ಪೊಬಲಗು ವಿನಿಯೋಗಿಸುವದಕ್ಕೆ ಯೂವಾಗ್ಯೂ ಇಷ್ಟವುಳ್ಳವರಾಗಿದ್ದೇವೆಂದು ಬೋರ್ಡಿನವರು ಅಭಿಪ್ರಾಯ ಪಟ್ಟಿರುತ್ತಾರೆ.

5. ಜಹಗೀರುಗಳಿಗೆ ಹೋಗತಕ್ಕ ರಸ್ತೆಗಳನ್ನು ಕ್ರಮವಾಗಿಟ್ಟುಕೊಂಡಿರುವದಕ್ಕೆ ತಗಲುವ ಭಾಗವೊಡನ್ನು, ಅಂಥಾ ಜಹಗೀರುಗಳಿಂದ ಹುಟ್ಟುವ ಲೋಕಲ್ ಸೆಸ್ಸು ಪೊಬಲಗ್ಗಿಂತಲೂ ಬಹಳ ಜಾಸ್ತಿ ಆಗುವ ಪ್ರಯುಕ್ತ, ಡಿಸ್ಟ್ರಿಕ್ಟ್ ಫಂಡಿನಿಂದ ಕೊಡುವದು ನಿಲ್ಲಿಸಿಬಿಡಬೇಕೆಂದು 1906ನೆ ಸಾಲಿನ ಮೈಸೂರ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದು 239ನೆ ನಂಬರು ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ತಿಳಿಸಬೇಕೆಂತ 4—1—07ನೆ ಮತ್ತು ಂ 6021-8—L. F. 200-06—1ನೆ ನಂಬರ್ ಲೆಟರು ಓದಲಾಯಿತು.

ಅಂಥಾ ಜಹಗೀರುಗಳೇ ಈ ಡಿಸ್ಟ್ರಿಕ್ಟಿನಲ್ಲಿ ಇಲ್ಲ.

6. ಮ್ಯುನಿಸಿಪಾಲಿಟಿ ಅಲ್ಲದ ಗ್ರಾಮಗಳಲ್ಲಿ ಹುಟ್ಟುವ ಮನೆ ತೆರಿಗೇ ಪೊಬಲಗನ್ನು ಅಂಥಾ ಗ್ರಾಮಗಳ ಪಾಕೀಜಾ ಗೋಸ್ಕರ ಉಪಯೋಗಿಸಬೇಕೆಂತ ಮೈಸೂರ್ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 219ನೆ ನಂಬರು ವಿಷಯವನ್ನು ಬೋರ್ಡಿನವರು ತಿಳುವಳಿಕೆ ಬ್ಯೆ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರಿಂದ 11-16—1—07ನೆ ಮತ್ತು ಂ 6289-89—L. F. 86-06—1ನೆ ನಂಬರು ಲೆಟರು ನೋಡಿಸಿ ರವಾನಿಸಿದ್ದು ಓದಲಾಯಿತು.

ನೋಟು ಮಾಡಲಾಯಿತು.

7. 50 ಮನೆಗಳು ಇರತಕ್ಕ ಗ್ರಾಮಗಳಲ್ಲಿಯೂ ಗ್ರಾಮ ಪಾಕೀಜಾ ರೂಲ್ಸು ಜಾರೀಲಿ ತರಿಸಬೇಕೆಂತ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 223ನೆ ನಂಬರು ವಿಷಯದಲ್ಲಿ ಬೋರ್ಡಿನವರ ತೀರ್ಮಾನವನ್ನು ತಿಳಿಯಿಸಿಕೊಡಬೇಕೆಂತ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿ ಸಾಹೇಬರವರಿಂದ ತಲ್ಪಿದ 11—1—07ನೆ ಮತ್ತು ಂ 6233-40—L. F. 190-06—1ನೆ ನಂಬರು ಲೆಟರು ಓದಲಾಯಿತು.

ಈ ರೂಲ್ಸು 100 ಮನೆಗಳಿಗೆ ಕಮ್ಮಿಯಿಲ್ಲದೆ ಇರುವ ಗ್ರಾಮಗಳಲ್ಲಿ ಮಾತ್ರ ಜಾರೀಲಿ ಇರಬೇಕೆಂತ ಅಭಿಪ್ರಾಯಪಟ್ಟಿರುತ್ತಾರೆ.

8. ರೂಲ್ಸಿಗೆ ಅನುಸಾರವಾಗಿ ಆಡುಗಳನ್ನು ದೊಡ್ಡಿಗೆ ಕೇರಿಸಿದರೆ ಮೊದಲಿಗಿಂತಲೂ ಜಾಸ್ತಿ ಜಲ್ಮಾನೆ ವಸೂಲ್ಮಾಡತಕ್ಕ ವಿಚಾರದಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 230ನೆ ನಂಬರು ವಿಷಯದಲ್ಲಿ ಪೈಸಿಡೆಂಟರ ಅಭಿಪ್ರಾಯದೊಡನೆ ಬೋರ್ಡಿನವರ ತೀರ್ಮಾನವನ್ನು ರಿಪೋರ್ಟು ಮಾಡಬೇಕೆಂತ 11—1—07ನೆ ಮತ್ತು ಂ 6217-24—L. F. 196-06—1ನೆ ನಂಬರು ಲೆಟರು ಓದಲಾಯಿತು.

ಆಡು 1ಕ್ಕೆ 1 ಆಣೆ ಯಂತೆ ವಸೂಲ್ಮಾಡುತ್ತಿರುವ ದರವೇ ಸಾಕೆಂತ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

9. ಕೆಲವು ಡಿಸ್ಟ್ರಿಕ್ಟ್ ಫಂಡು ರೋಡುಗಳಿಗೆ ಸಾಲಾಬಾದಿ ಕಾಂಗಾಲಿಗೆ ತಗಲುವ ಖರ್ಚನ್ನು ಪ್ರೊವಿಷಿಯಲ್ ಫಂಡಿನಿಂದ ಕೊಡಿಸಿಕೊಡಬೇಕೆಂತ 1906ನೆ ಸಾಲಿನಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 211ನೆ ನಂಬರು ವಿಷಯವನ್ನು ಬೋರ್ಡಿನವರ ಆಲೋಚನೆ ಬ್ಯೆ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರಿಂದ 11—1—07ನೆ ಮತ್ತು ಂ 6241-8—L. F. 178-06—1ನೆ ನಂಬರು ಲೆಟರು ಓದಲಾಯಿತು.

ನೋಟು ಮಾಡಲಾಯಿತು.